**ದಿನಾಂಕಃ 09/09/2025 ರಂದು ಅಸಾಃ4 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ SPA ವಕೀಲರಿಂದಃ**

ನಮ್ಮ ಗ್ರಾಮದಿಂದ ಎಡವನಹಳ್ಳಿ ಗ್ರಾಮ ಅರ್ಧ ಕಿ.ಮೀ ಆಗುತ್ತದೆ. ಜಾಗದ ಸುತ್ತಮುತ್ತಲು ಪೊದೆ ಇದ್ದು ಪಕ್ಕದಲ್ಲಿ ಜೋಳ ಇರುತ್ತದೆ ಎಂದರೆ ಸರಿ. ಹೊಲದಲ್ಲಿ ಜೋಳ ಬೆಳೆಯುತ್ತಾರೆ ಎಂದರೆ ಸರಿ. ನನಗೆ ಮೌಖಿಕವಾಗಿ ಕರೆದಿರುತ್ತಾರೆ, ನೋಟೀಸ್ ಕೊಟ್ಟಿಲ್ಲ. ಸ್ಥಳದಲ್ಲಿ ಸುಮಾರು 50 ಜನರು ಸೇರಿದ್ದರು. ಸ್ಥಳದಲ್ಲಿದ್ದ ಜನರನ್ನು ಕರೆದು ಮಹಜರಿಗೆ ಸಹಿ ಹಾಕಿಸಿರುವುದಿಲ್ಲ. ಚಾಸಾ-1 ರವರು ಪರಿಚಯಸ್ಥರು ಎಂದರೆ ಸರಿ. ಚಾಸಾ-2 ರವರು ನನಗೆ ಗೊತ್ತು. ಸ್ಥಳದಲ್ಲಿ ಒಂದೇ ಮಹಜರನ್ನು ಮಾಡಿರುತ್ತಾರೆ. ಸ್ವೆಟರ್ ಮೇಲೆ ಬರವಣಿಗೆ ಇತ್ತಾ ಎಂದು ನಾನು ನೋಡಿಲ್ಲ. ಚಪ್ಪಲಿಯ ಸೈಜ್ ಗೊತ್ತಿಲ್ಲ ಅದು ಕೆಂಪು ಬಣ್ಣ ಇತ್ತು. ಅದು ಯಾವ ಕಂಪನಿಗೆ ಸೇರಿದ್ದು ಎಂದು ಗೊತ್ತಿಲ್ಲ. ಬೈಕನ್ನು ನಾನು ನೋಡಿಲ್ಲ.

ನನ್ನ ಸಮಕ್ಷಮದಲ್ಲಿ ಆ ದಿನ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಮಹಜರಿನಲ್ಲಿ ಬರೆದಿರುವ ವಿಚಾರ ಗೊತ್ತಿಲ್ಲ. ಚಾಸಾ-1 ಮತ್ತು 2 ರವರು ನಮ್ಮ ಊರಿನವರಾಗಿದ್ದರಿಂದ ಅವರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರು

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ